PUBLICATION : VIJAYAVANI
DATE : 16/12/13
EDITION : BANGALORE
PAGE : 11

# ಬೆಂಗಳೂರು ಮಿಡ್‌ನೈಟ್ ಮ್ಯಾರಥಾನ್ ಕೀನ್ಯಾದ ಡೇನಿಯಲ್ ಯೆಗಾನ್‌ಗೆ ಪ್ರಶಸ್ತಿ

**ಬೆಂಗಳೂರು:** ಕೀನ್ಯಾದ ದೂರ ಅಂತರದ ಓಟಗಾರರಾದ ಡೇನಿಯಲ್ ಯೆಗಾನ್ ಹಾಗೂ ಗ್ಲಾಡಿಸ್ ಟಾರಸ್ 7ನೇ ಆವೃತ್ತಿಯ ಎಸ್‌ಬಿಐ ಬೆಂಗಳೂರು ಮಿಡ್‌ನೈಟ್ ಮ್ಯಾರಥಾನ್‌ನ ಫುಲ್ ಮ್ಯಾರಥಾನ್ ಮುಕ್ತ ವಿಭಾಗದ ಸ್ಪರ್ಧೆಯಲ್ಲಿ ಚಾಂಪಿಯನ್ ಆಗಿದ್ದಾರೆ. ಯೆಗಾನ್‌ಗೆ ಇದು ಸತತ 2ನೇ ಪ್ರಶಸ್ತಿಯಾಗಿದೆ. ಭಾರತೀಯ ವಿಭಾಗದಲ್ಲಿ ತ್ರಿಪುರಾರಿಸಿಂಗ್ ಹಾಗೂ ಸುಧಾಮಣಿ ಚಾಂಪಿಯನ್ ಆದರು.



ಡೇನಿಯಲ್ ಯೆಗಾನ್

ವೈಟ್‌ಫೀಲ್ಡ್‌ನ ಕೆಟಿಪಿಒ ಆವರಣದಲ್ಲಿ ಶನಿವಾರ ರಾತ್ರಿ ನಡೆದ ಸ್ಪರ್ಧೆಯಲ್ಲಿ ಯೆಗಾನ್ 2 ಗಂಟೆ . 11.52ನಿಮಿಷದಲ್ಲಿ ದೂರ ಕ್ರಮಿಸಿದರೆ, ಇಥಿಯೋಪಿಯಾದ ಎಬೆಸಾ ಮೆರ್ಗಾ ಹಾಗೂ ಗೆಟಾಹುನ್ ಟಿಲಾಹುನ್ ನಂತರದ ಸ್ಥಾನ ಪಡೆದರು. ಮಹಿಳಾ ವಿಭಾಗದಲ್ಲಿ ಟಾರಸ್ 2 ಗಂಟೆ 59:44 ನಿಮಿಷದಲ್ಲಿ ಗುರಿ ಕ್ರಮಿಸಿದರೆ, ಇಥಿಯೋಪಿಯಾದ ಚಾಲ್ತು ನಿಗುಸೆ ಶಿಫೆರಾವ್ ಹಾಗೂ ಕೀನ್ಯಾದ ಲಾರ್ನಾ ಚೆನಾಂಗಟ್ 2 ಹಾಗೂ 3ನೇ ಸ್ಥಾನ ಪಡೆದರು.

ಭಾರತೀಯ ವಿಭಾಗದ ಪುರುಷರಲ್ಲಿ ಎಂಇಜಿ ಸೆಂಟರ್‌ನ ತ್ರಿಪುರಾರಿಸಿಂಗ್ 2 ಗಂಟೆ 25.35 ನಿಮಿಷದಲ್ಲಿ ಗುರಿ ಕ್ರಮಿಸಿದರೆ, ಪಿಸಿ ಪೂವಣ್ಣ ಹಾಗೂ ಪುಣೆಯ ವಿಶಾಲ್ ಶಿಲಿಂಕರ್ ನಂತರದ ಸ್ಥಾನ ಪಡೆದರು. ಮಹಿಳಾ ವಿಭಾಗದಲ್ಲಿ ಸುಧಾಮಣಿ 3 ಗಂಟೆ 9.19 ನಿಮಿಷದಲ್ಲಿ ಗುರಿ ಮುಟ್ಟಿದರೆ, ದ್ವಿತೀಯ ಸ್ಥಾನ ಕರ್ನಾಟಕದ ಭಗವತಿ ಪಡೆದುಕೊಂಡರು.

RED MONITORING SERVICE